ವಜ್ರಪ್ಪನವರನ್ನು ರಂಗಭೂಮಿಯಲ್ಲಿ ನೆಲೆಯೂರುವಂತೆ ಮಾಡುತ್ತಿದ್ದ ಸಂದರ್ಭದಲ್ಲಿ ಅವರಿಗೆ ಬಹಳ ಹೆಸರು ತಂದು ಕೊಟ್ಟ ನಾಟಕ 'ಪ್ರಚಂಡ ರಾವಣ'. ತಮ್ಮ ಸಾಹಿತ್ಯ ರಸಗಂಗೆ ಹರಿಸಿ ಕನ್ನಡ ನಾಟಕ ಜಗತ್ತಿನಲ್ಲಿ ಚಿರಸ್ಥಾಯಿಯಾಗಿ ನಿಲ್ಲುವಂತಹ 'ಪ್ರಚಂಡ ರಾವಣ' ನಾಟಕ ರಚಿಸಿದವರು ಕಣಗಾಲ್ ಪ್ರಭಾಕರ ಶಾಸ್ತ್ರೀ.

ಕನ್ನಡ ಭಾಷೆಯನ್ನು ಪ್ರಳಯ ಕಾಲದ ರುದ್ರನಂತೆ ತಾಂಡವವಾಡಿಸುವ ಮೂಲಕ 'ಪ್ರಚಂಡ ರಾವಣ'ನನ್ನು ಸೃಷ್ಟಿಸಿದ ಪ್ರಭಾಕರ ಶಾಸ್ತ್ರಿಗಳಿಗೆ ರಂಗಭೂಮಿಯಲ್ಲಿ ಸಂಗೀತದ ಸಾಥ್ ಕೊಟ್ಟವರು ವಜ್ರಪ್ಪ. ಈ ನಾಟಕಕ್ಕೆ ಅವರು ನೀಡಿದ ಸಂಗೀತ ನಿರ್ದೇಶನವೇ ತಾರಾ ವರ್ಚಸ್ಸು ತಂದು ಕೊಟ್ಟಿದ್ದು.

ನಾಟಕಗಳಿಗೆ ಸಂಗೀತ ಸಂಯೋಜನೆ ಮೂಲಕ ಕಳೆಗಟ್ಟಿಸುತ್ತಿದ್ದ ವಜ್ರಪ್ಪ ಕನ್ನಡದ ಜನಮನ್ನಣೆಯ ನಾಟಕಗಳಾದ ಬೆಳ್ಳಾವೆ ನರಹರಿಶಾಸ್ತ್ರೀ ವಿರಚಿತ 'ರಾಮಾಯಣ', ಬಿ. ಪುಟ್ಟಸ್ವಾಮಯ್ಯನವರ 'ಕುರುಕ್ಷೇತ್ರ', ಕೊಟ್ಟೂರಪ್ಪನವರ 'ದಾನಶೂರ ಕರ್ಣ' ಮೊದಲಾದ ಪೌರಾಣಿಕ ನಾಟಕಗಳಿಗೆ ಹೊಸ ಬಗೆಯ ಸಂಗೀತ ಸ್ಪರ್ಶ ನೀಡುವ ಮೂಲಕ ಪ್ರೇಕ್ಷಕರ ಮನಗೆದ್ದರು. ನಾಟಕ ಕಂಪನಿಗಳಿಂದ ನಿರಂತರವಾದ ಆಹ್ವಾನವನ್ನೂ ಪಡೆಯ ತೊಡಗಿದರು. ಸ್ವಾತಂತ್ರ್ಯಾನಂತರ ವಾಕ್ಚಿತ್ರಗಳ ಭರಾಟೆ ಹೆಚ್ಚಿದ್ದರಿಂದ ವೃತ್ತಿ ನಾಟಕ ಕಂಪೆನಿಗಳು ಅಸ್ತಿತ್ವಕ್ಕಾಗಿ ಹೋರಾಟ ನಡೆಸಬೇಕಾಯಿತು. ಕ್ರಮೇಣ ಅವುಗಳಲ್ಲಿ ಬಹಳಷ್ಟು ಕಂಪೆನಿಗಳು ನೇಪಥ್ಯಕ್ಕೆ ಸರಿದವು.

ಇದರ ನಡುವೆ ಇವರು ಅನೇಕ ಧ್ವನಿಸುರುಳಿಗಳಿಗೆ ನಾಟಕ ತಯಾರು ಮಾಡಿಕೊಟ್ಟರು. ಅನೇಕ ಹಳ್ಳಿಗಳಿಗೆ ಈ ಧ್ವನಿ ಸುರುಳಿಗಳಿಂದಲೇ ನಾಟಕ ಪ್ರಾಕ್ಟೀಸು ಮಾಡಿ ಅಭಿನಯಿಸಿದ್ದೂ ಇದೆ. ಬೆಂಗಳೂರಿನಲ್ಲಂತೂ ವರ್ಷದ ಬಹಳಷ್ಟು ಸಮಯ ಪೌರಾಣಿಕ ನಾಟಕಗಳನ್ನು ಅಭಿನಯಿಸಲು ವಜ್ರಪ್ಪನವರ ಶ್ರಮವೇ ಕಾರಣ ಎನ್ನುವುದನ್ನು ಯಾರೂ ಅಲ್ಲಗಳೆಯಲಾರರು.

ಹಾರ್ಮೋನಿಯಂನಿಂದ ಆರಂಭಗೊಂಡ ವಜ್ರಪ್ಪನವರ ರಂಗಯಾತ್ರೆಯಲ್ಲಿ ಅನೇಕ ಪಯಣಿಗರು ಅವರೊಡನಿದ್ದರು. ವಜ್ರಪ್ಪನವರ ಪತ್ನಿ ಚಂದ್ರಿಕಾ ಅವರು ಕಲಾವಿದೆಯಾಗಿ ದುಡಿದರು. ಮಕ್ಕಳೂ ತಂದೆ ತಾಯಿಯನ್ನು ಹಿಂಬಾಲಿಸಿ ಬಣ್ಣದ ಬದುಕಿನಲ್ಲಿ ಸೇರಿದರು. ಹಲವು ಶಿಷ್ಯರನ್ನು ಹಾರ್ಮೋನಿಯಂನಲ್ಲಿ ತಯಾರು ಮಾಡಿದ್ದು ವಜ್ರಪ್ಪನವರ ಹೆಗ್ಗಳಿಕೆ.

ಹಾರ್ಮೋನಿಯಂ ಮೇಷ್ಟ್ರು, ವಜ್ರಪ್ಪ ಸಂಗೀತ ನಿರ್ದೇಶನ ಮತ್ತು ನಾಟಕ ಹೇಳಿ ಕೊಡುವ ಗುರುಗಳಾಗುವ ಜೊತೆಗೆ ಕೆಲವು ಕಾಲ ನಾಟಕ ಕಂಪೆನಿಯನ್ನು ನಡೆಸಿದ್ದು ಇದೆ. ಇದರಿಂದ ಕಷ್ಟ ನಷ್ಟಗಳನ್ನು ಅನುಭವಿಸಿದರೂ ನಾಟಕ ರಂಗವನ್ನು ಈ ಸಂಗೀತಗಾರ ತೊರೆಯಲಿಲ್ಲ. ಅದರಲ್ಲಿಯೇ ಹೆಜ್ಜೆ ಹಾಕಿದರು. ಆ ಹೆಜ್ಜೆಗಳೇ ಅವರಿಗೆ ತಾರಾವರ್ಚಸ್ಸು ತಂದು ಕೊಟ್ಟವು.

ಪೌರಾಣಿಕ ನಾಟಕಗಳು ಮರೆಯಾಗಿ ಹೋದವು ಎಂಬ ಕೂಗು ಎದ್ದಿರುವಾಗಲೇ ಆ ಪ್ರಕಾರಕ್ಕೊಂದು ಗಟ್ಟಿ ನೆಲೆಯನ್ನು ಸಿಗುವಂತೆ ಮಾಡಿದವರಲ್ಲಿ ವಜ್ರಪ್ಪನವರಿಗೆ ಪ್ರಮುಖ ಸ್ಥಾನವಿದೆ.

ಪ್ರತಿಷ್ಠಿತ ಗುಬ್ಬಿ ವೀರಣ್ಣ ಪ್ರಶಸ್ತಿ—ರಾಜ್ಯೋತ್ಸವ—ಅಕಾಡೆಮಿ ಗೌರವ ಸಂದಿರುವ ವಜ್ರಪ್ಪನವರು ಕೊನೆಯುಸಿರು ಇರುವವರೆಗೂ ರಂಗಭೂಮಿಯನ್ನು ಮರೆಯಲಿಲ್ಲ. ನಾಟಕರಂಗ ಅದರಲ್ಲೂ ಹವ್ಯಾಸಿಗಳ ಪೌರಾಣಿಕ ರಂಗಭೂಮಿ ವಜ್ರಪ್ಪನವರ ನೆನಪು ಮಾಡದೇ ಮುಂದಡಿ ಇಡಲು ಸಾಧ್ಯವಿಲ್ಲ.

*